ಆ) ಹಾಗಿದ್ದಲ್ಲಿ, ಆಕ್ಟ್ರಾಯ್ ಪದ್ಧತಿಯನ್ನು ಪುನಃ ಜಾರಿಗೆ ತರುವಲ್ಲಿ ಸರಕಾರದವರು ಯಾವ ಕ್ರಮವನ್ನು ಕೈಗೊಂಡಿರುವರು.

ಇ) ಆಕ್ಟ್ರಾಯ್ ಪದ್ಧತಿಯನ್ನು ಪುನಃ ಜಾರಿಗೆ ತರುವಲ್ಲಿ ಈಗಿನ ಸರಕಾರದ ಧೋರಣೆಗಳೇನು?

ಶ್ರೀ ಕೆ.ಜಿ ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):

ಅ) ಇದುವರೆಗೂ ಯಾವ ನಿರ್ಧಾರವನ್ನು ತೆಗೆದುಕೊಂಡಿರುವುದಿಲ್ಲ.

ಆ) ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಲಾಗಿದ್ದು, ಪ್ರವೇಶ ತೆರಿಗೆ ಅಥವಾ ಆಕ್ಟ್ರಾಯ್ ಪದ್ಧತಿಯನ್ನು ಪುನಃ ಜಾರಿಗೆ ತರುವ ವಿಚಾರವನ್ನು ಸಮಿತಿಯ ಶಿಫಾರಸ್ಸಿನ ಮೇರೆಗೆ ಪರಿಶೀಲಿಸಲಾಗುವುದು.

ಇ) (ಅ) ಮತ್ತು (ಆ) ಉತ್ತರದಿಂದ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಗ್ರಾಮ ಸೇವಕರ ನೇಮಕಾತಿ

350 - ಶ್ರೀ ಉಮೇಶ್ ಕತ್ತಿ(ಹುಕ್ಕೇರಿ) : ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1200 ಗ್ರಾಮ ಸೇವಕರ ಹುದ್ದೆಗಳು ಖಾಲಿ ಇರುವುದು ನಿಜವೆ?

ಆ) ಹಾಗಿದ್ದಲ್ಲಿ, ಈ ಹುದ್ದೆಗಳನ್ನು ತುಂಬುವ ಯೋಜನೆ ಏನಾದರೂ ಸರ್ಕಾರದವರಲ್ಲಿದೆಯೇ?

ಇ) ಹಾಗಿದ್ದಲ್ಲಿ ಎಂದಿನಿಂದ ಈ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗುವುದು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು):

ಅ) ಹಾಲಿ ಕೃಷಿ ಇಲಾಖೆಯಲ್ಲಿ ಗ್ರಾಮ ಸೇವಕರ ಹುದ್ದೆಗಳು ಇಲ್ಲ. ಆದರೆ ಅದರ ತತ್ಸಮಾನ ಹುದ್ದೆಯಾದ ಕೃಷಿ ಸಹಾಯಕರ 1509 ಹುದ್ದೆಗಳು ಖಾಲಿ ಇವೆ.

ಆ) ಮಿತವ್ಯಯ ಕ್ರಮ ಜಾರಿಯಲ್ಲಿರುವುದರಿಂದ ಭರ್ತಿ ಮಾಡಲು ಕ್ರಮ ತೆಗೆದುಕೊಂಡಿಲ್ಲ.

ಇ) ಮಿತವ್ಯಯ ನಿರ್ಬಂಧ ಸಡಿಲಿಸಿದ ನಂತರ ಕ್ರಮ ತೆಗೆದುಕೊಳ್ಳಲಾಗುವುದು.

ರಾಜ್ಯದಲ್ಲಿರುವ ನಿರುದ್ಯೋಗಿಗಳಾಗಿರುವ ಪದವೀಧರರ ಬಗ್ಗೆ

353 - ಶ್ರೀ ಉಮೇಶ್ ಕತ್ತಿ (ಹುಕ್ಕೇರಿ) : ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನಿರುದ್ಯೋಗಿಗಳಾಗಿರುವ ವಿವಿಧ ಪದವೀಧರರ ಒಟ್ಟು ಸಂಖ್ಯೆ ಎಷ್ಟು? (ಬಿ.ಎ, ಬಿ.ಎಸ್ಸಿ, ಬಿ.ಕಾಂ, ಎಂ.ಎ, ಎಂ.ಕಾಂ, ಎಂ.ಎಸ್ಸಿ, ಬಿ.ಎಸ್ಸಿ-ಎಜಿ, ಎಂ.ಎಸ್ಸಿ ಎಜಿ, ಬಿ.ಇ, ಎಂ.ಇ, ಎಂ.ಬಿ.ಬಿ.ಎಸ್ ಪದವಿಯನ್ನು ಹೊಂದಿರುವವರ ಪ್ರತ್ಯೇಕ ಅಂಕಿಅಂಶಗಳ ಪಟ್ಟಿ ನೀಡುವುದು,

ಆ) ಈ ಪದವೀಧರರಿಗೆ ಉದ್ಯೋಗ ಒದಗಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಸಿ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು):

ಅ) ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳ ದಾಖಲೆಯಲ್ಲಿ 1990ನೇ ಡಿಸೆಂಬರ್ ಅಂತ್ಯದಲ್ಲಿ 10,271 ಸ್ನಾತಕೋತ್ತರ ಪದವೀಧರರೂ ಸೇರದಂತೆ 1,20,254 ಪದವೀಧರರು ತಮ್ಮ ಹೆಸರನ್ನು ನೊಂದಾಯಿಸಿಕೊಂಡು ಉದ್ಯೋಗಾಕಾಂಕ್ಷಿಗಳಾಗಿದ್ದರು.

ಒಟ್ಟು ಅಭ್ಯರ್ಥಿಗಳ ಪೈಕಿ 34,662

ಬಿ.ಎ 15,700

ಬಿ.ಎಸ್ಸಿ 23,757

ಬಿ.ಕಾಂ 5,252

ಎಂ.ಎ 988

ಎಂ.ಕಾಂ 2,999

ಎಂ.ಎಸ್ಸಿ 791

ಬಿ.ಎಸ್ಸಿ ಎಜಿ 49

ಎಂ.ಎಸ್ಸಿ ಎಜಿ 11,892

ಎಂ.ಬಿ.ಬಿ.ಎಸ್ 84 ಪದವೀಧರರಿರುತ್ತಾರೆ.

ಆ) ಬೇಡಿಕೆಗಳು ಬಂದಲ್ಲಿ ಜೇಷ್ಠತೆಯ ಆಧಾರದ ಮೇಲೆ ನೇಮಕಾತಿ ಪ್ರಾಧಿಕಾರಕ್ಕೆ ಅಭ್ಯರ್ಥಿಗಳ ಹೆಸರುಗಳನ್ನು ಕಳುಹಿಸಿಕೊಡಲಾಗುವುದು.

ಕರ್ನಾಟಕ ಮಹಾರಾಷ್ಟ್ರ ಗಡಿಯಲ್ಲಿ ರಾಜ್ಯದ ಪರವಾಗಿ ಹೋರಾಟ ನಡೆಸಿದ ದಿ||ಎಂ.ಎಸ್. ಟೋಪಣ್ಣನವರು ಪ್ರತಿಮೆ ನಿರ್ಮಿಸುವ ಬಗ್ಗೆ

352 - ಶ್ರೀ ಉಮೇಶ್ ಕತ್ತಿ (ಹುಕ್ಕೇರಿ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ-ಮಹಾರಾಷ್ಟ್ರ ಗಡಿಯಲ್ಲಿ ರಾಜ್ಯದ ಪರವಾಗಿ ಸತತ ಹೋರಾಟ ನಡೆಸಿದ ಕನ್ನಡ ಚಳುವಳಿಗಾರ ದಿ: ಎಮ್. ಎಸ್ ಟೋಪಣ್ಣನವರ ಪುಥ್ಥಳಿಯನ್ನು ಬೆಳಗಾವಿ ಪಟ್ಟಣದ ಬೋಗಾರವೇಸ್ ವೃತ್ತದಲ್ಲಿ ಇಡುವ ಯೋಜನೆ ಏನಾದರೂ ಸರ್ಕಾರದಲ್ಲಿದೆಯೇ:

ಆ) ಬೆಳಗಾವಿಯಲ್ಲಿ ಹೊಸದಾಗಿ ನಿರ್ಮಿತಗೊಳ್ಳುತ್ತಿರುವ ಬಡಾವಣೆಗೆ ದಿ: ಎಮ್. ಎಸ್.ಟೋಪಣ್ಣನವರ ಹೆಸರು ಇಡುವ ಸಲಹೆ ಏನಾದರೂ ಸರ್ಕಾರಕ್ಕೆ ಇದೆಯೇ?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):

ಅ) ಇಲ್ಲ.

ಆ) ಇಲ್ಲ

ಬೆಳಗಾವಿ ಪಟ್ಟಣದ ನವೀಕರಣದ ಬಗ್ಗೆ

351 - ಶ್ರೀ ಉಮೇಶ್ ಕತ್ತಿ (ಹುಕ್ಕೇರಿ): ಮಾನ್ಯ ವಸತಿ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಪಟ್ಟಣದಲ್ಲಿ ಹೆಚ್ಚಿನ ವಾಹನಗಳ ಸಂಚಾರದಿಂದಾಗಿ ಜನರಿಗೆ ಓಡಾಡುವುದು ಕಷ್ಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ:

ಆ) ಹಾಗಿದ್ದಲ್ಲಿ, ಬೆಳಗಾವಿ ಪಟ್ಟಣವನ್ನು ಮಾಸ್ಟರ್ ಪ್ಲಾನ್ ಪ್ರಕಾರ ನವೀಕರಣ ಗೊಳಿಸಲಾಗುವುದೇ?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):

ಅ) ಜನ ನಿಬಿಡ ರಸ್ತೆಗಳಲ್ಲಿ ಮಾತ್ರ ಹೆಚ್ಚಿನ ವಾಹನ ಸಂಚಾರದಿಂದಾಗಿ ಜನರಿಗೆ ಓಡಾಡಲು ಕಷ್ಟಕರವಾಗಿದೆ.

ಆ) ಇದು ಪರಿಶೀಲನೆಯಲ್ಲಿದೆ.